# ಆಹಾ ಸುದ್ದಿ!

★ ಸಸಿತೋಟ

ಬ್ರಿಟನ್ನಿನಲ್ಲಿ ಹಾರ್ಸ್ ಚೆಸ್ಟ್‌ನಟ್ ಕಾಯಿ ಬಳಸಿ ಜಾನಪದ ಆಟ ‘ಕಾಂಕರ್’ ಆಡುತ್ತಾರಂತೆ. ಕಳೆದ ವರ್ಷದ ವಿಶ್ವ ಕಾಂಕರ್ ಚಾಂಪಿಯನ್ ಡೇವಿಡ್ ಜಾಕಿನ್ಸ್ ಜಾಗತಿಕವಾಗಿ ಖ್ಯಾತಿ ಪಡೆದಿದ್ದು ಮಾತ್ರ ಈ ಆಟದಿಂದಲ್ಲ, ಆದರೆ ವಾಕಿಂಗ್ ಸ್ಟಿಕ್ಕಿಗೆ ಸಿಕ್ಕಿಸಿಕೊಂಡ ವಿಸ್ಕಿ ಗ್ಲಾಸಿನಿಂದ ಅಂತೆ.



ಅಮೆರಿಕದಲ್ಲಿ ಮೇಗನ್ ಹಾಗೂ ಸ್ಟೀವ್ ದಂಪತಿ ಹೊಸ ಬಿಯರ್ ಕಂಡು ಹಿಡಿದಿದ್ದಾರಂತೆ. ಇದು ಗುಡ್ ಬಾಯ್ ಡಾಗ್ ಬಿಯರ್. ಹೌದು, ಇದು ನಾಯಿಗಳಿಗೆ ಮಾತ್ರ. ನಾಯಿಗಳನ್ನು ಒಳಗೆ ಬಿಟ್ಟುಕೊಳ್ಳುವ ಸುಮಾರು 20 ಬಾರ್‌ಗಳಲ್ಲಿ ಲಭ್ಯವಂತೆ. ಆದರೆ ಕಿಕ್ ಕೊಡಲು ಬೇಕಾಗುವಷ್ಟು ಆಲ್ಕೋಹಾಲ್ ಇದರಲ್ಲಿಲ್ಲ ಎಂದು ನಾಯಿಗಳು ಇನ್ನೂ ತಗಾದೆ ಮಾಡಿಲ್ಲವಂತೆ.



ಕಳೆದ ಒಂದೆರಡು ವರ್ಷಗಳಲ್ಲಿ ವಿಚಿತ್ರ ಅಂತರ್ಜಾಲ ಸವಾಲುಗಳನ್ನು ಎದುರಿಸುವುದು ಜಾಸ್ತಿಯಾಗಿಬಿಟ್ಟಿದೆ. ಇದಕ್ಕೆ ಇತ್ತೀಚಿನ ಸೇರ್ಪಡೆ ‘ಫಾಲಿಂಗ್ ಸ್ಟಾರ್ಸ್’ ಅಂತೆ. ಐಷಾರಾಮಿ ಕಾರಿನಿಂದ ಮುಖ ಅಡಿಯಾಗಿ ಬಿದ್ದು ಸುತ್ತಲೂ ಬ್ಯಾಗು, ನಗದು ಮಾತ್ರವಲ್ಲದೇ ಸಾಕು ಪ್ರಾಣಿಗಳಂತಹ ಸಿರಿವಂತಿಕೆ ಪ್ರದರ್ಶಿಸುವ ವಸ್ತುಗಳನ್ನು ಬೀಳಿಸಿಕೊಂಡು ಆ ಫೋಟೋವನ್ನು ಸಾಮಾಜಿಕ ಮಾಧ್ಯಮದಲ್ಲಿ ಹಾಕಿಕೊಳ್ಳುವುದು. ಚೀನಾದಲ್ಲಿ ತೆರಿಗೆ ಇಲಾಖೆ ಸಿಬ್ಬಂದಿ ಕೆಲಸ ಸುಲಭವಾಗಿರಬಹುದು.

ಅಂಟಾರ್ಕ್ಟಿಕಾದಲ್ಲಿ ಕೆಲವು ಸಂಶೋಧಕರು ಅತ್ಯಂತ ಚಳಿಯಲ್ಲಿ ಅಂದರೆ – 70 ಡಿಗ್ರಿ ಸೆಲ್ಸಿಯಸ್‌ನಲ್ಲಿ ಆಹಾರ ಹೇಗೆ ವರ್ತಿಸುತ್ತದೆ ಎಂದು ಸಂಶೋಧನೆಗೆ ಇಳಿದಾಗ ಫೋರ್ಕ್, ನೂಡಲ್ಸ್ ಎಲ್ಲವೂ ಚಳಿಗೆ ಹೆಪ್ಪುಗಟ್ಟಿ ಕಲ್ಲಾಗಿ ಕೂತವಂತೆ. ಸಂಶೋಧಕರು ಆಹಾರ ತರುವ ವಿಮಾನಕ್ಕಾಗಿ ಕಾಯುತ್ತ, ಆಹಾರವಿಲ್ಲದಿದ್ದರೆ ಏನಾಗುತ್ತದೆ ಎಂಬುದರ ಮೇಲೆ ಸಂಶೋಧನೆ ಮಾಡುತ್ತ ಕೂತಿರಬಹುದು.



ಮನಿಲಾದ ಕಟ್ಟಿಕೊಂಡ ಚರಂಡಿಯೊಂದನ್ನು ಸ್ವಚ್ಛ ಮಾಡಿದಾಗ ರಾಶಿ ರಾಶಿ ಪರ್ಸ್‌ಗಳು, ಗುರುತಿನ ಚೀಟಿಗಳು ಸಿಕ್ಕವಂತೆ. ಪಿಕ್‌ಪಾಕೆಟ್ ಮಾಡಿದವು. ಪೊಲೀಸರು ಗುರುತಿನ ಚೀಟಿ ಹಿಡಿದುಕೊಂಡು ಖಾಲಿ ಪರ್ಸ್‌ಗಳನ್ನ ಅವುಗಳ ಮಾಲೀಕರಿಗೆ ತಲುಪಿಸುವ ಕೆಲಸ ಮಾಡುತ್ತಿದ್ದಾರಂತೆ.



ಪೆರುವಿನಲ್ಲಿ ಗೂಗಲ್ ಸ್ಟ್ರೀಟ್ ದಂಪತಿಯ ವಿಚ್ಛೇದನ ಮಾಡಿಸಿದೆ ಗೊತ್ತೇ? ಐದು ವರ್ಷಗಳ ಹಿಂದೆ ಮಹಿಳೆಯೊಬ್ಬಳು ರಾಜಧಾನಿ ಲಿಮಾದ ರಸ್ತೆ ಪಕ್ಕದ ಬೆಂಚ್ ಮೇಲೆ ಪ್ರಿಯಕರನ ಜೊತೆ ಕಾಲ ಕಳೆದಿದ್ದಳಂತೆ. ಆಕೆಯ ಪತಿ ಇತ್ತೀಚೆಗೆ ಅದೇ ಜಾಗಕ್ಕೆ ಹೋಗಲು ಗೂಗಲ್ ಸ್ಟ್ರೀಟ್‌ನಲ್ಲಿ ಹುಡುಕಾಡಿದಾಗ ಅದರಲ್ಲಿ ಪತ್ನಿ ಹಾಗೂ ಆಕೆಯ ನಲ್ಲನ ಫೋಟೊ ಲಗತ್ತಾಗಿತ್ತಂತೆ. ಈಗ ಪತಿ ಗೂಗಲ್ ಸ್ಟ್ರೀಟ್ ಅನ್ನು ಹೊಗಳಿದರೆ, ಪತ್ನಿ ಬೈಯುತ್ತ ಕುಳಿತಿದ್ದಾಳಂತೆ.